## ವಿವಿಧ ಭಾಗೀದಾರರ ಪರಿಚಯ

### ಕರ್ನಾಟಕ ನೀರಾವರಿ ನಿಗಮ ನಿಯಮಿತ

ಸರ್ಕಾರದ ಒಡೆತನದಲ್ಲಿರುವ ಕಂಪನಿ. ನೀರಾವರಿ ಯೋಜನೆಗಳ ಯೋಜನಾ ವರದಿ ಹಾಗೂ ಕ್ರಿಯಾಯೋಜನೆ ಸಿದ್ಧಪಡಿಸುವುದು, ಅನುಷ್ಠಾನ ಮತ್ತು ನಿರ್ವಹಣೆ ಇದರ ಮುಖ್ಯ ಜವಾಬ್ದಾರಿ. ನಿಗಮಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದು, ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು ದಿನ ನಿತ್ಯದ ಕಾರ್ಯಚಟುವಟಿಕೆ ನಿರ್ವಹಿಸುತ್ತಿದ್ದು, ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾದ ವೃತ್ತಿಪರ ನಿರ್ದೇಶಕರ ತಂಡವು ಸಹಕರಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಸಹಭಾಗಿತ್ವ ನೀರಾವರಿ ನಿರ್ವಹಣೆ, ನವೀನ ಮಾದರಿಯ ನೀರಾವರಿ ಪದ್ಧತಿಗಳಿಗೆ ಪ್ರೋತ್ಸಾಹ, ನೀರಿನ ಮಿತಬಳಕೆಯ ವಿಧಾನಗಳ ಆವಿಷ್ಕಾರ, ಸಮಗ್ರ ಕೃಷಿ ಪದ್ಧತಿ ಮುಂತಾದವುಗಳಿಗೆ ನಿಗಮವು ಆದ್ಯತೆ ನೀಡಿದೆ.

### ಭದ್ರಾ ಕಾಡಾ–ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಕಾಲುವೆ ನೀರಾವರಿ ಅಚ್ಚುಕಟ್ಟು ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ 1979–80ರಲ್ಲಿ ರಚಿಸಲಾಗಿದೆ. ಹೊಲಗಾಲುವೆ, ಬಸಿಗಾಲುವೆಗಳ ನಿರ್ಮಾಣ, ಜೌಗು ಮತ್ತು ಸವಳು ಪ್ರದೇಶ ಅಭಿವದ್ಧಿ, ಭೂ ಅಭಿವೃದ್ಧಿ, ಕೃಷಿಗೆ ಉತ್ತೇಜನ, ಅಚ್ಚುಕಟ್ಟು ಪ್ರದೇಶದಲ್ಲಿ ರಸ್ತೆ ನಿರ್ಮಾಣ, ಮುಖ್ಯವಾಗಿ ನೀರು ಬಳಕೆದಾರ ಸಹಕಾರ ಸಂಘಗಳ ಸ್ಥಾಪನೆ ಮತ್ತು ನಿರ್ವಹಣೆ ಕಾರ್ಯಗಳನ್ನು ಪ್ರಾಧಿಕಾರ ಅನುಷ್ಠಾನಗೊಳಿಸುತ್ತಿದೆ.

### ಅಡ್ವಾನ್ಸಡ್ ಸೆಂಟರ್ ಫಾರ್ ಇಂಟಿಗ್ರೇಟೆಡ್ ವಾಟರ್ ರಿಸೋರ್ಸಸ್ ಮ್ಯಾನೇಜ್‌ಮೆಂಟ್

ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾಗಿರುವ ಸಂಸ್ಥೆ. ಜಲ ಸಂಪನ್ಮೂಲ ಇಲಾಖೆಗೆ ಬೆಂಬಲವಾಗಿ ಕಾರ್ಯ ನಿರ್ವಹಿಸುತ್ತದೆ. ಸುಧಾರಿತ ನೀರಾವರಿ ನಿರ್ವಹಣೆ, ನೀರಾವರಿಗೆ ಸಂಬಂಧಪಟ್ಟ ಕಾನೂನುಗಳು ಹಾಗೂ ಯೋಜನೆಗಳ ಬಗ್ಗೆ ಸಂಶೋಧನೆ ಕೈಗೊಳ್ಳುವುದು, ಜ್ಞಾನ ಬಲವರ್ಧನೆ ಮತ್ತು ಮುಖ್ಯವಾಗಿ ರಾಜ್ಯದಲ್ಲಿ ನೀರಿಗೆ ಸಂಬಂಧಪಟ್ಟಂತೆ ಕೆಲಸ ಮಾಡುವ ವಿವಿಧ ಇಲಾಖೆಗಳನ್ನು ಬೆಸೆಯುವ ಸಂಪರ್ಕ ಸೇತುವೆಯಾಗಿ ಕೆಲಸ ನಿರ್ವಹಿಸುತ್ತದೆ. ಪ್ರಸ್ತುತ ಗೊಂದಿ ಉಪಯೋಜನೆಗೆ ಸಂಬಂಧಪಟ್ಟಂತೆ, ತಾಂತ್ರಿಕ ಮಾಹಿತಿ, ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆಗೆ ಪೂರಕ ಸಹಕಾರಗಳನ್ನು ಒದಗಿಸುತ್ತದೆ.

## ಯೋಜನಾ ಅನುಷ್ಠಾನ ಸಹಾಯ ಸಂಸ್ಥೆ

ಗೊಂದಿ ನೀರಾವರಿ ಕಾಲುವೆ ಸಮಗ್ರ ಪುನಶ್ಚೇತನ ಕಾಮಗಾರಿಯ ನಿರ್ವಹಣೆಗಾಗಿ ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್ ಯೋಜನಾ ಸಹಾಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಸಂಸ್ಥೆಯು ಉದ್ದೇಶಿತ ಫಲಿತಾಂಶಗಳ ಸಾಧನೆ ಹಾಗೂ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ನೀರಾವರಿ ನಿಗಮಕ್ಕೆ ಸಹಕರಿಸಲಿದೆ. ನೀರು ಬಳಕೆದಾರ ಸಂಘಗಳ ಸಾಮರ್ಥ್ಯ ಬಲವರ್ಧನೆ ಹಾಗೂ ಯೋಜನೆಯ ಮೌಲ್ಯಮಾಪನೆ ಮತ್ತು ಪರಿವೀಕ್ಷಣೆಯಲ್ಲೂ ಕೈಜೋಡಿಸಲಿದೆ.

### ಯೋಜನಾ ಸಹಾಯ ಸಂಸ್ಥೆಯ ಪ್ರಮುಖ ಚಟುವಟಿಕೆಗಳು

- ನೀರು ಬಳಕೆದಾರ ಸಂಘಗಳ ರಚನೆ, ನೋಂದಣಿ ಹಾಗೂ ಸಾಮರ್ಥ್ಯಾಭಿವೃದ್ಧಿ ಮಾಡುವುದು.
- ಸಿವಿಲ್ ಕಾಮಗಾರಿಗಳು ಮತ್ತು ಸಾಂಸ್ಥಿಕ ಚಟುವಟಿಕೆಗಳ ಗುಣಮಟ್ಟ ಪರಿಶೀಲನೆ. ಅಗತ್ಯ ತಾಂತ್ರಿಕ ಸಲಹೆ ನೀಡುವುದು.
- ಸೂಕ್ತ ವರದಿಗಳನ್ನು ತಯಾರಿಸುವುದು, ದತ್ತಾಂಶ ಸಂಗ್ರಹಣೆ, ನಿಯಮಿತ ಯೋಜನಾ ಪ್ರಗತಿ ವರದಿಗಳು ಮತ್ತು ಇತರೆ ಮಾಹಿತಿ ಸಂಗ್ರಹಣೆ.
- ಕೃಷಿ ಚಟುವಟಿಕೆಗಳ ತರಬೇತಿ, ಪ್ರಾತ್ಯಕ್ಷಿಕೆ, ಅಧ್ಯಯನ ಪ್ರವಾಸ ಏರ್ಪಡಿಸುವುದು.
- ಸಂಘಗಳಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಳಕ್ಕೆ ಕ್ರಮವಹಿಸುವುದು ಹಾಗೂ ಕಾಮಗಾರಿ ಅನುಷ್ಠಾನದಲ್ಲಿ ಪರಿಸರ ರಕ್ಷಣೆಗೆ ಆದ್ಯತೆ.


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಮುಖ್ಯ ಅಭಿಯಂತರರು, ಯೋಜನಾ ಅನುಷ್ಠಾನ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ–577201

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಮಲವಗೊಪ್ಪ, ಶಿವಮೊಗ್ಗ–577222

ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್
ನಂ. 28, 1ನೇ ಅಡ್ಡರಸ್ತೆ ಬೀದಿ, ಗಾಂಧಿ ನಗರ,
ಭಂಡಾರಿ ಗ್ಯಾಸ್ ಏಜನ್ಸಿ ಎದುರು, ಶಿವಮೊಗ್ಗ–577201


ಮುದ್ರಣ: ರಾಯಲ್, ಶಿವಮೊಗ್ಗ, 98862 73495

ADB ASIAN DEVELOPMENT BANK | KARNATAKA NEERAVARI NIGAM LTD | SMEC Local People. Global Experience

# ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ

# ನೀರು ಬಳಕೆದಾರರ ಸಹಕಾರ ಸಂಘಗಳ ಪಾತ್ರ ಹಾಗೂ ಭಾಗೀದಾರರ ಪರಿಚಯ



**ನೆರವು:** ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್
**ಅನುಷ್ಠಾನ:** ಕರ್ನಾಟಕ ನೀರಾವರಿ ನಿಗಮ ನಿಯಮಿತ
**ಯೋಜನಾ ಸಹಾಯ ಸಂಸ್ಥೆ:** ಎಸ್.ಎಂ.ಇ.ಸಿ.
**ಸಹಯೋಗ:** ಭದ್ರಾ ಕಾಡಾ, ಅಡ್ವಾನ್ಸ್‌ಡ್ ಸೆಂಟರ್ ಫಾರ್ ಇಂಟಿಗ್ರೇಟೆಡ್ ವಾಟರ್ ರಿಸೋರ್ಸಸ್ ಮ್ಯಾನೇಜ್‌ಮೆಂಟ್

## ಮಾದರಿ ಸಂಘದ ಲಕ್ಷಣಗಳು



- ಪ್ರತಿ ತಿಂಗಳು ತಪ್ಪದೆ ಸಭೆ ನಡೆಸುವುದ.
- ನಿಗದಿತ ಸಮಯಕ್ಕೆ ವಾರ್ಷಿಕ ಮಹಾಸಭೆ ಆಯೋಜಿಸುವುದು
- ಚುನಾವಣೆ ಮೂಲಕ ಸಂಘದ ಪದಾಧಿಕಾರಿಗಳ ನೇಮಕ
- ಪ್ರತಿವರ್ಷ ಸಂಘದ ಆಡಿಟ್ ಮಾಡಿಸುವುದು ಹಾಗೂ ಖರ್ಚು–ವೆಚ್ಚಗಳಲ್ಲಿ ಪಾರದರ್ಶಕತೆ ಕಾಯ್ದು ಕೊಳ್ಳುವುದು
- ಸಂಘದ ದಾಖಲಾತಿಗಳ ಸೂಕ್ತ ನಿರ್ವಹಣೆ
- ಸಂಘದ ಸದಸ್ಯರು ಹಾಗೂ ನಿರ್ದೇಶಕ ಮಂಡಳಿಯಲ್ಲಿ ಶೇ 30ಕ್ಕಿಂತ ಅಧಿಕ ಮಹಿಳಾ ಪ್ರಾತಿನಿಧ್ಯಕ್ಕೆ ಅವಕಾಶ ನೀಡುವುದು
- ಸಂಘದ ಕಟ್ಟಡ, ಗೋದಾಮು ಕಾಲುವೆ, ತೂಬು ಹಾಗೂ ಇನ್ನಿತರೆ ಆಸ್ತಿಗಳನ್ನು ಜವಾಬ್ದಾರಿಯಿಂದ ಕಾಪಾಡುವುದು
- ಭದ್ರಾ ಕಾಡಾ ಹಾಗೂ ಇನ್ನಿತರೆ ಇಲಾಖೆಗಳೊಂದಿಗೆ ನಿರಂತರ ಸಂಪರ್ಕ ಹಾಗೂ ಲಭ್ಯ ಯೋಜನೆಗಳ ಪರಿಣಾಮಕಾರಿ ಬಳಕೆ ಕುರಿತು ಸದಸ್ಯರಿಗೆ ಅರಿವು
- ಅಚ್ಚುಕಟ್ಟು ಪ್ರದೇಶದ ಕೊನೆಯ ರೈತರಿಗೂ ನೀರು ತಲುಪುವಂತೆ ಜಾಗ್ರತೆ ವಹಿಸುವುದು
- ಭದ್ರಾ ಕಾಡಾ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳುವುದು
- ಸಂಘದ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದ ಉಸ್ತುವಾರಿ ಮತ್ತು ನಿರ್ವಹಣೆ
- ಕೃಷಿಯಲ್ಲಿ ನೀರನ್ನು ಮಿತವಾಗಿ ಬಳಸಬಹುದಾದ ಎಲ್ಲಾ ಮಾರ್ಗಗಳನ್ನು ಅನುಸರಿಸುವುದು ಹಾಗೂ ನೀರಿನ ದುಂದುಗಾರಿಕೆಗೆ ಕಡಿವಾಣ

## ಯೋಜನೆ ಅನುಷ್ಠಾನಕ್ಕೆ ಬೆಂಬಲ

- ಜಂಟಿ ತಪಾಸಣೆ ಮೂಲಕ ಕಾಲುವೆ ಮತ್ತು ಅಚ್ಚುಕಟ್ಟು ಪ್ರದೇಶದ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹಾರ ಸೂಚಿಸುವುದು
- ಕ್ರಿಯಾಯೋಜನೆ ತಯಾರಿ ಹಾಗೂ ಅನುಷ್ಠಾನದಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ
- ಕಾಮಗಾರಿಗಳ ಅನುಷ್ಠಾನಕ್ಕೆ ಸಲಹೆ ಹಾಗೂ ಬೆಂಬಲ
- ಕಾಮಗಾರಿ ನಡೆಯುವಾಗ ಮಣ್ಣು, ನೀರು ಹಾಗೂ ಪರಿಸರಕ್ಕೆ ಹಾನಿಯಾಗದಂತೆ ಸೂಕ್ತ ಎಚ್ಚರಿಕೆ ವಹಿಸುವುದು
- ಅಚ್ಚುಕಟ್ಟು ಪ್ರದೇಶದಲ್ಲಿ ಸಣ್ಣ ಪ್ರಮಾಣದ ಸೂಚಿತ ಕಾಮಗಾರಿಗಳನ್ನು ಕೈಗೊಳ್ಳುವುದು
- ನೀರು ಬಳಕೆದಾರರಿಂದ ನಿಗದಿತ ವಂತಿಕೆ ಸಂಗ್ರಹಿಸುವುದು
- ನೀರಿನ ಕರ ವಸೂಲಿ ಮತ್ತು ನಿಗದಿತ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡುವುದು ಹಾಗೂ ಉಳಿಕೆ ಮೊತ್ತದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದು
- ಸರ್ಕಾರದಿಂದ ಬರುವ ಅನುದಾನ ('ಒನ್ ಟೈಮ್ ಫಂಕ್ಷನಲ್ ಗ್ರಾಂಟ್') ಪಡೆಯುವುದು ಮತ್ತು ಅದರ ಸೂಕ್ತ ಬಳಕೆ
- ಕಛೇರಿ ಕಟ್ಟಡ ಹಾಗೂ ಗೋದಾಮು ನಿರ್ಮಾಣಕ್ಕೆ ಕ್ರಮವಹಿಸುವುದು



## ಕೃಷಿ ಅಭಿವೃದ್ಧಿ ಚಟುವಟಿಕೆಗಳು




- ಅಚ್ಚುಕಟ್ಟು ಪ್ರದೇಶದಲ್ಲಿ ಮಣ್ಣಿನ ಫಲವತ್ತತೆ ಕಾಪಾಡಲು ಆದ್ಯತೆ ನೀಡುವುದು
- 'ಶ್ರೀ' ಪದ್ಧತಿಯಲ್ಲಿ ಭತ್ತ ಬೆಳೆಯಲು ರೈತರಿಗೆ ವ್ಯಾಪಕ ಪ್ರೋತ್ಸಾಹ ನೀಡುವುದು, ಪ್ರಾತ್ಯಕ್ಷಿಕೆಗಳನ್ನು ನಡೆಸುವುದು ಇದಕ್ಕಾಗಿ ಕೃಷಿ ಇಲಾಖೆಯೊಂದಿಗೆ ನಿರಂತರ ಸಂಪರ್ಕ
- ಏಕ ಬೆಳೆ ಪದ್ಧತಿಗೆ ಕಡಿವಾಣ ಹಾಕಿ ಮಿಶ್ರ ಬೆಳೆಗೆ ಆದ್ಯತೆ ನೀಡುವುದು
- ಸಾವಯವ ಅಥವಾ ಸುಸ್ಥಿರ ಕೃಷಿಗೆ ಒತ್ತು ನೀಡುವುದು, ನಿಧಾನವಾಗಿ ರಾಸಾಯನಿಕಗಳಿಗೆ ಕಡಿವಾಣ ಹಾಕುವುದು
- ಬೇಸಿಗೆಯಲ್ಲಿ ಕಡಿಮೆ ನೀರು ಕೇಳುವ ದ್ವಿದಳ ಧಾನ್ಯ ಹಾಗೂ ಎಣ್ಣೆಕಾಳು ಬೆಳೆಗಳನ್ನು ಹಾಕುವಂತೆ ಪ್ರೇರಣೆ
- ನಿಗದಿತ ಸಮಯದಲ್ಲಿ ಮಣ್ಣು ಪರೀಕ್ಷೆ ಮಾಡಿಸುವಂತೆ ಅರಿವು
- ಹನಿ ಹಾಗೂ ತುಂತುರು ನೀರಾವರಿ ಅಳವಡಿಸಿ ಕೊಳ್ಳುವಂತೆ ಸದಸ್ಯರಿಗೆ ಪ್ರೇರೇಪಣೆ
- ನೀರಿನ ಮಿತ ಬಳಕೆ ಹಾಗೂ ಕಡಿಮೆ ನೀರಿನಲ್ಲಿ ಮಾಡಬಹುದಾದ ಕೃಷಿ ಪದ್ಧತಿಗಳ ಬಗ್ಗೆ ವ್ಯಾಪಕ ಪ್ರಚಾರ
- ಕೃಷಿ, ತೋಟಗಾರಿಕೆ, ಪಶುವೈದ್ಯ ಇಲಾಖೆ ಅಧಿಕಾರಿಗಳನ್ನು ಕರೆಸಿ, ಮಾಹಿತಿ ವಿನಿಯಮ ಸಭೆ ಏರ್ಪಡಿಸುವುದು